# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1328
ಸದಸ್ಯರ ಹೆಸರು : ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
ಉತ್ತರಿಸುವ ದಿನಾಂಕ : 24.12.2021.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಡಾ: ಬಿ.ಆರ್. ಅಬೇಡ್ಕರ್ ಅಭಿವೃದ್ಧಿ ನಿಗಮ, ಡಾ: ಬಾಬು ಜಗಜೀವರಾಮ್ ಅಭಿವೃದ್ಧಿ ನಿಗಮ, ತಾಂಡ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಗಳ ವತಿಯಿಂದ ನಿಗಮದ ಸಾಂಸ್ಥಿಕ ಕೋಟಾದಡಿಯಲ್ಲಿ ನಿಗದಿಪಡಿಸಿದ/ಮಂಜೂರು ಮಾಡಿದ ಗುರಿ ಎಷ್ಟು; (ಕ್ಷೇತ್ರವಾರು ವಿವಿಧ ಯೋಜನೆವಾರು ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮಗಳಿಂದ ಸಾಂಸ್ಥಿಕ ಕೋಟಾದಡಿ ಜಿಲ್ಲಾವಾರು, ವಿಧಾನಸಭಾ ಕ್ಷೇತ್ರವಾರು ಗುರಿ ನಿಗದಿಪಡಿಸುವುದಿಲ್ಲ.<br><br>ಪರಿಶಿಷ್ಟ ಜಾತಿ ಜನಾಂಗದವರಿಗೆ ಆಯವ್ಯಯದಲ್ಲಿ ನಿಗದಿಪಡಿಸುವ ಅನುದಾನವನ್ನು ನಿಗಮವಾರು ಮತ್ತು ಯೋಜನಾವಾರು ಹಂಚಿಕೆ ಮಾಡುವ ಅನುದಾನದಂತೆ ಶೇ. 15 ರಷ್ಟು ಸರ್ಕಾರಿ ಸಾಂಸ್ಥಿಕ ಕೋಟಾ ಹಾಗೂ ಶೇ. 5 ರಷ್ಟು ನಿಗಮದ ನಿರ್ದೇಶಕರ ಕೋಟಾ ಗುರಿ ನಿಗದಿಪಡಸಲಾಗುತ್ತದೆ. |
| ಆ) | ಸಾಂಸ್ಥಿಕ ಕೋಟಾದಡಿ ನಿಗದಿ/ಮಂಜೂರು ಹಾಗೂ ಫಲಾನುಭವಿಗಳನ್ನು ಆಯ್ಕೆ ಮಾಡಲು ಇರುವ ಮಾನದಂಡಗಳೇನು; (ವಿವರ ನೀಡುವುದು) | ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳನ್ನೇ ಸಾಂಸ್ಥಿಕ ಕೋಟಾದಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸಲಾಗುತ್ತಿದೆ. ವಿವರವನ್ನು **ಅನುಬಂಧ-1**ರಲ್ಲಿ ನೀಡಿದೆ. |
| ಇ) | ನಿಗಮದ ನಿಯಮಗಳ ಅನ್ವಯ ಯಾವುದೇ ಒಂದು ಯೋಜನೆಯಡಿಯಲ್ಲಿ ಆಯ್ಕೆ ಮಾಡಲು ಆಯ್ಕೆ ಪೂರ್ಣ ಫಲಾಪೇಕ್ಷಿಯ ಅರ್ಜಿ ಸಲ್ಲಿಸುವುದು ಕಡ್ಡಾಯವೇ; ಹಾಗೂ ಅರ್ಜಿ ಸಲ್ಲಿಸದಿರುವಂತಹ ಫಲಾನುಭವಿಗಳನ್ನು ಆಯ್ಕೆ ಮಾಡಿ ತದನಂತರ ಅರ್ಜಿ ದಾಖಲಾತಿಗಳನ್ನು ಪಡೆದು ಸೌಲಭ್ಯ ಒದಗಿಸಲು ಅವಕಾಶವಿರುವುದೇ (ಸಂಪೂರ್ಣ ವಿವರ ನೀಡುವುದು) | ಸಾಂಸ್ಥಿಕ ಕೋಟಾದಡಿ ಆಯ್ಕೆಗೊಂಡ ಫಲಾಪೇಕ್ಷಿಗಳು ಅರ್ಜಿ ಸಲ್ಲಿಸಬೇಕು ಎಂಬ ನಿಯಮ ಕಡ್ಡಾಯವಾಗಿರುವುದಿಲ್ಲ. ಹಾಗೂ ಅರ್ಜಿ ಸಲ್ಲಿಸದೇ ಇರುವಂತಹ ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರ ಅರ್ಜಿ ದಾಖಲಾತಿಗಳನ್ನು ಪಡೆದು ಸೌಲಭ್ಯ ಪಡೆಯಲು ಅವಕಾಶ ಇರುತ್ತದೆ. |

.... 2

| | | |
|---|---|---|
| ಈ) | ಸಾಂಸ್ಥಿಕ ಕೋಟಾದಡಿ ಮಂಜೂರು ಮಾಡುವ ಮುನ್ನ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಸಭೆಯ ಅನುಮೋದನೆ ಪಡೆಯದೇ ಹಾಗೂ ನಿಗಮದ ನಿಯಮಗಳನ್ವಯ ಅರ್ಹತೆ ಬಗ್ಗೆ ಪರಿಶೀಲಿಸದೇ ಕೇವಲ ಶಿಫಾರಸ್ಸು ಪತ್ರದ ಆಧಾರಗಳ ಮೇಲೆ ಮಂಜೂರು ಮಾಡುವುದು ಮತ್ತು ಬದಲಾವಣೆ ಮಾಡುವುದು ಕ್ರಮ ಬದ್ಧವೇ; (ಮಾಹಿತಿ ಒದಗಿಸುವುದು) | ಸಾಂಸ್ಥಿಕ ಕೋಟಾದಡಿ ಮಂಜೂರು ಮಾಡುವ ಮುನ್ನಾ ತಾಲ್ಲೂಕು ಮಟ್ಟದ ಆಯ್ಕೆ ಸಮಿತಿ ಅನುಮೋದನೆ ಪಡೆಯುವ ಅಗತ್ಯ ಇರುವುದಿಲ್ಲ.<br><br>ಮಾನ್ಯ ಇಲಾಖಾ ಸಚಿವರಿಗೆ ಶೇ.15ರಷ್ಟು ಹಾಗೂ ಮಾನ್ಯ ನಿಗಮದ ಅಧ್ಯಕ್ಷರಿಗೆ ಶೇ.5ರಷ್ಟು ಒಟ್ಟು ಶೇ.20ರಷ್ಟು ವಿವೇಚನೆಗೆ ಸಾಂಸ್ಥಿಕ ಕೋಟಾವನ್ನು ನಿಗದಿಪಡಿಸಿರುವುದರಿಂದ ಮಾನ್ಯ ಸಚಿವರು ಮತ್ತು ಅಧ್ಯಕ್ಷರು ಅವರು ಅಧಿಕಾರವನ್ನು ಬಳಸಿ ಫಲಾಫೇಕ್ಷಿಗಳನ್ನು ಆಯ್ಕೆ ಮಾಡುವ ಪಟ್ಟಿಯನ್ನು ಪರಿಗಣಿಸಲಾಗುವುದು.<br><br>ಒಂದು ವೇಳೆ ಆಯ್ಕೆಗೊಂಡ ಫಲಾಪೇಕ್ಷಿಯ ದಾಖಲಾತಿಗಳನ್ನು ಪರಿಶೀಲಿಸಿದಾಗ ನಿಯಮಾನುಸಾರ ಅರ್ಹತೆ ಇಲ್ಲದೇ ಇದ್ದಲ್ಲಿ ಬದಲಾವಣೆಗೆ ಕ್ರಮ ವಹಿಸಲಾಗುವುದು. |
| ಉ) | ಕಳೆದ ಮೂರು ವರ್ಷಗಳಲ್ಲಿ ಬೀದರ್ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಿಗೆ ಸಾಂಸ್ಥಿಕ ಕೋಟಾದಡಿ ಆಯ್ಕೆಗೊಂಡ ಫಲಾನುಭವಿಗಳೆಷ್ಟು: (ವಿವಿಧ ಯೋಜನೆಗಳವಾರು, ಫಲಾನುಭವಿಗಳ ಹೆಸರು, ವಿಳಾಸ, ವರ್ಷವಾರು, ಆರ್ಥಿಕ ಸೌಲಭ್ಯವಾರು ಸಂಪೂರ್ಣ ಮಾಹಿತಿಯೊಂದಿಗೆ ವಿವರ ಒದಗಿಸುವುದು) | **ಅನುಬಂಧ -02** ರಲ್ಲಿ ನೀಡಿದೆ. |

**ಸಂಖ್ಯೆ: ಸಕಇ 234 ಆರ್&ಐ 2021**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.